ಭಯದಿಂದ ಕಂಪಿಸಿದಳು. ಗಂಡನ ಹೆಸರು ಹೇಳಿ, ಅವರನ್ನು ಕರೆಯುವ ಈ ಹೆಂಗಸು ಫೌರಸ್ ರೋಡಿನಿಂದ ಮಾತನಾಡುತ್ತಿರುವಳೇ? ಅವಳು ಫೌರಸ್ ರಸ್ತೆಯನ್ನು ಒಂದೆರಡು ಬಾರಿ ನೋಡಿದ್ದಳು. ಆ ದೃಶ್ಯ ಕಣ್ಣುಗಳೆದುರು ಮೂಡಿತು. ಈಗ ಅವಳ ಮುಖದಲ್ಲೂ ಭಯ ಆವರಿಸಿತು. ಅವಳು ಗ್ರ್ಯಾಂಟ್ ರೋಡ್ ಸ್ಟೇಷನ್ನಿನಿಂದ ಇಳಿದು ಹದಿಮೂರನೇ ನಂಬರಿನ ಟ್ರಾಮ್‌ನಲ್ಲಿ ಕೂತು ಮುಂಬಾ ದೇವಿ ಮಾತೆಯ ದೇವಸ್ಥಾನಕ್ಕೆ ಅನೇಕ ಬಾರಿ ಹೋಗಿದ್ದಳು; ಆಗ ಟ್ರಾಮ್ ಫೌರಸ್ ರೋಡಿನಿಂದಲೇ ಹಾದು ಹೋಗಿತ್ತು. ಪಿಲಾ ಹೌಸ್‌ನಿಂದ ಟ್ರಾಮ್ ತಿರುವನ್ನು ತೆಗೆದುಕೊಂಡಾಗ ಅವಳು ತುಂಬಾ ಭಯಭೀತಳಾಗುತ್ತಿದ್ದಳು. ಟ್ರಾಮ್ ಇಡೀ ರಸ್ತೆಯಿಂದ ಹಾದು ಹೋದ ನಂತರವೇ ಕಣ್ಣುಗಳನ್ನು ತೆರೆಯುತ್ತಿದ್ದಳು. ಆ ದೃಶ್ಯ ಕ್ಷಣ ಮಾತ್ರದಲ್ಲಿಯೇ ಅವಳ ಕಣ್ಣುಗಳೆದುರು ಮೂಡಿತು. ಫೌರಸ್ ರೋಡಿನ ಮಹಿಳೆಯೊಬ್ಬಳು ಈ ವೇಳೆಯಲ್ಲಿ ಕೇಶವಲಾಲರನ್ನು ಕರೆಯಲು ಕಾರಣವೇನು? ಈ ಮಹಿಳೆಗೂ ಕೇಶವಲಾಲರಿಗೂ ಏನು ಸಂಬಂಧ?

ಫೌರಸ್ ರೋಡಿನ ಹೆಸರು ಕಿವಿಗಳಿಗೆ ಬೀಳುತ್ತಲೇ ಕೇಶವಲಾಲರ ಡ್ರಾಯಿಂಗ್ ರೂಮಿನ ಗಾಳಿ ಸಹ ಕಂಪಿಸಿತು ಎಂಬಂತೆ ಕೇಶವಲಾಲರು ತಮ್ಮ ಕಣ್ಣುಗಳನ್ನು ತೆರೆದರು. ಅವರು ಮೊದಲು ಹೆಂಡತಿಯನ್ನು ನೋಡಿ, ಕಡೆಗೆ ಗೋಡೆಯ ಕಡೆಗೆ ನೋಡಿದರು. ಗೋಡೆಯ ಮೇಲೆ ಗಾಂಧೀಜಿವರ ಭಾವಚಿತ್ರ ತೂಗಾಡುತ್ತಿತ್ತು.

‘ರಿಸೀವರ್‌ನ ಮೌತ್‌ಪೀಸಿನ ಮೇಲೆ ಅಂಗೈಯನ್ನಿಟ್ಟು ಹೆಂಡತಿ ಕೇಶವಲಾಲರಿಗೆ ಹೇಳಿದಳು, ‘ಫೌರಸ್ ರೋಡಿನಿಂದ ಮಹಿಳೆಯೊಬ್ಬಳು ನಿಮ್ಮೊಂದಿಗೆ ಮಾತನಾಡಬೇಕಂತೆ.’

ಕೇಶವಲಾಲರು ಕಕ್ಕಾಬಿಕ್ಕಿಯಾಗಿ ಎದ್ದು ನಿಂತರು. ಹೆಂಡತಿಯ ಕಣ್ಣುಗಳೊಂದಿಗೆ ತಮ್ಮ ಕಣ್ಣುಗಳನ್ನು ಕೂಡಿಸುವುದಕ್ಕೆ ಅವರಿಗೆ ಭಯವಾಯಿತು. ಹೆಂಡತಿಯ ನೋಟಗಳಲ್ಲಿ ತಮ್ಮ ಬಗ್ಗೆ ಅನುಮಾನವಿಲ್ಲ ತಾನೇ?

‘ಹಲೋ...’ ಕೇಶವಲಾಲರು ಧೋತಿಯ ಅಂಚಿನಿಂದ ತಮ್ಮ ಹಣೆಯನ್ನು ಒರೆಸಿಕೊಳ್ಳುತ್ತಾ ರಿಸೀವರನ್ನು ಕೈಯಲ್ಲಿ ತೆಗೆದುಕೊಂಡರು, ‘ನಾನು ಕೇಶವಲಾಲ್ ಗಾಂಧಿ ಮಾತನಾಡುತ್ತಿದ್ದೇನೆ.’

‘ಕೇಳಿ, ಕೇಶವಲಾಲ್‌ಜಿ!’ ಅತ್ತ ಕಡೆಯಿಂದ ಗಂಭೀರ ಧ್ವನಿಯೊಂದು ಕೇಳಿ ಬಂತು, ‘ನಿಮಗೆ ಹರಿಲಾಲ್ ಗಾಂಧಿ ಮಿಸ್ಟರ್ ಎಚ್.ಎಂ. ಗಾಂಧಿ ಗೊತ್ತೆ?’

‘ಹರಿಲಾಲ್ ಗಾಂಧಿ?’ ಕೇಶವಲಾಲರು ಗಾಬರಿಗೊಂಡರು, ‘ನೀವು...ನೀವು...ಹರಿಲಾಲ್ ಚಿಕ್ಕಪ್ಪನ ಬಗ್ಗೆ ಹೇಳುತ್ತಿದ್ದೀರ? ಆದರೆ ನೀವ್ಯಾರು? ಹರಿಲಾಲ್ ಚಿಕ್ಕಪ್ಪ ಎಲ್ಲಿದ್ದಾರೆ?’

‘ಈಗ ನಿಮ್ಮ ಚಿಕ್ಕಪ್ಪ ಹರಿಲಾಲ್ ಶಿವಡಿ ಆಸ್ಪತ್ರೆಯಲ್ಲಿ ತಮ್ಮ ಜೀವನದ ಕೊನೆಯ ಉಸಿರನ್ನು ಎಣಿಸುತ್ತಿದ್ದಾರೆ. ಅವರ ಜೇಬಿನಲ್ಲಿ ನಿಮ್ಮ ಕಾರ್ಡ್ ಸಿಕ್ಕಿತು, ಅದಕ್ಕೇ ನಾನು ನಿಮಗೆ ಫೋನ್ ಮಾಡುತ್ತಿದ್ದೇನೆ.’

‘ಆದರೆ...ಆದರೆ...ನೀವ್ಯಾರು?’

‘ಫೌರಸ್ ರೋಡಿನಲ್ಲಿ ರೇಶ್ಮಾ ಬಾಯಿಯ ಬಂಗ್ಲೆ ಎಲ್ಲರಿಗೂ ಗೊತ್ತಿದೆ...ಚೌಕದ ಬಿಲ್ಡಿಂಗ್‌ನಲ್ಲಿ ನನ್ನ ಕೋಣೆಯಲ್ಲಿ ನಿಮ್ಮ ಈ ಹರಿಲಾಲ್ ಚಿಕ್ಕಪ್ಪ ವಾಸಿಸುತ್ತಿದ್ದರು. ನಿನ್ನೆ ಅವರು ಪ್ರಜ್ಞೆಯನ್ನು ಕಳೆದುಕೊಂಡಾಗ ನಾನು ಅವರನ್ನು ಶಿವಡಿ ಆಸ್ಪತ್ರೆಗೆ ಸೇರಿಸಿ ಬಂದೆ. ಈಗ ಅವರು ಜೀವನ್ಮರಣದ ನಡುವೆ ಹೋರಾಡುತ್ತಿದ್ದಾರೆ. ನಾನೀಗ ಪಬ್ಲಿಕ್ ಟೆಲಿಫೋನ್ ಬೂತ್‌ನಿಂದ ಮಾತನಾಡುತ್ತಿದ್ದೇನೆ, ಹೆಚ್ಚು ಹೊತ್ತು ಮಾತನಾಡಲಾರೆ..’

‘ಅರೇ, ಹರಿಲಾಲ್ ಚಿಕ್ಕಪ್ಪ ನಿಮ್ಮ ಮನೆಗೆ ಹೇಗೆ ಬಂದರು? ಅವರು ಎಂದಿನಿಂದ ನಿಮ್ಮ ಮನೆಯಲ್ಲಿದ್ದರು?’

‘ನಾನು ಪಬ್ಲಿಕ್ ಟೆಲಿಫೋನ್ ಬೂತಿನಿಂದ ಮಾತಾಡುತ್ತಿದ್ದೇನೆ ಎಂದು ನಿಮಗೆ ಹೇಳಿದೆನಲ್ಲ, ನಾನು ಹೆಚ್ಚು ಮಾತನಾಡುವ ಸಮಯವಲ್ಲ... ನೀವು ನಮ್ಮ ಮನೆಗೆ ಬರಬಹುದು....ಚೌಕ್ ಬಿಲ್ಡಿಂಗ್...ಫೌರಸ್ ರೋಡ್...’

‘ಆದರೆ...ಆದರೆ...’ ಕೇಶವಲಾಲರು ನಿಜವಾಗಿಯೂ ಹೆದರಿದರು. ಅವರು ಫೌರಸ್ ರೋಡನ್ನು ನೋಡಿದ್ದರು, ಆದರೆ ಅಲ್ಲಿಗೆ ಹೋಗುವುದು ಹೇಗೆ?

‘ನಿಮ್ಮ ಹೆಸರು ಹೇಳಿ...’

ಅತ್ತ ಕಡೆಯಿಂದ ಫೋನ್ ಕಟ್ಟಾದ ಶಬ್ದ ಕೇಳಿಸಿತು.

‘ಹಲೋ...ಹಲೋ...’ ಕೇಶವಲಾಲರು ಹೆದರಿದರು. ನಂತರ ಟೆಲಿಫೋನಿನ ಕ್ರೆಡಿಲ್ ಮೇಲೆ ಬೆರಳನ್ನು ಒತ್ತಿದರು. ಅತ್ತ ಕಡೆಯಿಂದ ಲೈನ್ ಕಟ್ಟಾಗಿತ್ತು. ಕೇಶವಲಾಲರು ಫೋನನ್ನು ಕೆಳಗಿಟ್ಟು, ಹಾಸಿಗೆಯಲ್ಲಿ ದಢಾರನೆ ಕೂತರು. ಹಾಸಿಗೆಯ ಒಂದು ತುದಿಯಲ್ಲಿದ್ದ ಚರಕಾದ ಮೇಲೆ ಅವರ ದೃಷ್ಟಿ ಹರಿಯಿತು. ಗೋಡೆಯಲ್ಲಿ ತೂಗಾಡುತ್ತಿದ್ದ ಗಾಂಧೀಜಿಯವರ ಭಾವಚಿತ್ರಕ್ಕೆ ಹಾಕಿದ್ದ, ಕೈಯಿಂದ ತಯಾರಿಸಿದ ನೂಲಿನ ಹಾರ ಗಾಳಿಗೆ ಸರಿದಾಡುತ್ತಿತ್ತು.

‘ಏನ್ ವಿಷಯ?’ ಹೆಂಡತಿ ಸಮೀಪಕ್ಕೆ ಬಂದಳು.

‘ನೀವೇಕೆ ಇಷ್ಟು ಹೆದರಿದ್ದೀರ? ಮತ್ತೆ...ಮತ್ತೆ... ಹರಿಲಾಲ ಚಿಕ್ಕಪ್ಪನ ಸಮಾಚಾರವೇನು?’

ಕೇಶವಲಾಲರು ನಿಟ್ಟುಸಿರು ಬಿಟ್ಟು, ಹೆಂಡತಿಗೆ ಮೆಲ್ಲನೆ ಟೆಲಿಫೋನಿನಲ್ಲಿ ದೊರೆತ ಸುದ್ದಿಯನ್ನು ಹೇಳಿದರು. ಈ ಸುದ್ದಿಯಿಂದ ಇಬ್ಬರೂ ಸ್ವಲ್ಪ ಹೊತ್ತು ಮೋಸ ಹೋದವರಂತೆ ಮೌನ ವಹಿಸಿದರು.

‘ಸಮಯ ಹೆಚ್ಚಿಲ್ಲ, ಹರಿಲಾಲ ಚಿಕ್ಕಪ್ಪನ ಬಗ್ಗೆ ತಿಳಿದುಕೊಳ್ಳಲೇ ಬೇಕು...’ ಕೇಶವಲಾಲರು ಹೇಳಿದರು, ‘ಈಗ್ಗೆ ನಾಲ್ಕೈದು ತಿಂಗಳ ಹಿಂದೆಯಷ್ಟೇ ನಾವು ಅವರನ್ನು ದೇವದಾಸ್ ಚಿಕ್ಕಪ್ಪನ ಮನೆಯಲ್ಲಿ ನೋಡಿದ್ದೆವು, ಅಲ್ಲಿ...’

‘ಆಗ ಅವರು ತುಂಬಾ ಸೊರಗಿದ್ದರು.’ ಹೆಂಡತಿ ಅವರ ಮಾತನ್ನು ಪೂರ್ಣಗೊಳಿಸಿದಳು. ಅವರನ್ನು ಮತ್ತೆಂದೂ ನೋಡುವುದಿಲ್ಲವೇನೋ ಎಂದು ಆಗ ಅನ್ನಿಸಿತ್ತು. ಅವರ ಜೀವಮಾನವಿಡಿಯ ಅಲೆದಾಟದ ಆಯಾಸ ಅವರ ರೋಮ ರೋಮಗಳಲ್ಲಿ ಜಿನುಗುತ್ತಿತ್ತು...’ ಅವಳ ಧ್ವನಿಯಲ್ಲಿ ದುಃಖ ಉಮ್ಮಳಿಸಿ ಬಂತು.

ಕೇಶವಲಾಲರು ಕ್ಷಣಕಾಲ ಯೋಚನೆಯಲ್ಲಿ ಕಳೆದು ಹೋದರು.

‘ಏನು ಯೋಚ್ನೆ ಮಾಡುತ್ತಿದ್ದೀರ? ಹರಿಲಾಲ ಚಿಕ್ಕಪ್ಪರ ಬಗ್ಗೆ ಪೂರ್ಣ ಸಮಾಚಾರ ಸಿಗುವುದೇ...?’

‘ಆ ಬಗ್ಗೆಯೇ ಯೋಚನೆ ಮಾಡುತ್ತಿದ್ದೇನೆ. ಇಡೀ ಸಮಾಚಾರವನ್ನು ಫೌರಸ್ ರೋಡಿನ ಆ ಬಾಯಿಯೇ ಕೊಡಲು ಸಾಧ್ಯ...ಅವಳ ಮನೆಗೆ ಹೋಗಲು...’ ಕೇಶವಲಾಲರ ಧ್ವನಿ ಕಂಪಿಸಿತು.

‘ನಾನು ಸುರೇಂದ್ರರಿಗೆ ಫೋನ್ ಮಾಡ್ತೀನಿ... ಸುರೇಂದ್ರರನ್ನು ಜೊತೆಗೆ ಕರೆದುಕೊಂಡು ಫೌರಸ್ ರೋಡಿಗೆ ಹೋಗಿ ಬರುತ್ತೇನೆ.’

ಕೇಶವಲಾಲರು ರಿಸೀವರ್ ಎತ್ತಿ ಸುರೇಂದ್ರ ಮಶರೂವಾಲಾರವರ ಮನೆಯ ನಂಬರ್‌ಗೆ ಫೋನ್ ಮಾಡಿದರು.

‘ಹಲೋ’ ಅತ್ತ ಕಡೆಯಿಂದ ಸುರೇಂದ್ರ ಮಶರೂವಾಲಾರ ಧ್ವನಿ ಕೇಳಿಸಿತು.

‘ಸುರೇಂದ್ರಜಿ...ನಾನು ಕೇಶವಲಾಲ ಮಾತನಾಡುತ್ತಿದ್ದೇನೆ...’

‘ನಮಸ್ಕಾರ’ ಸುರೇಂದ್ರರ ಮಂದ, ಆದರೆ ಉತ್ಸಾಹದ ಧ್ವನಿ ಕೇಳಿಸಿತು. ‘ಇವತ್ತು ಬೆಳಿಗ್ಗೆ ಮನು ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದಳು. ಕೇಶವರ ಮದುವೆಯಾದಾಗ ಅವರ ಸೊಸೆಗಾಗಿ ಬಾ ಅವರು ವಿಶೇಷವಾಗಿ ಹಸಿರು ಕೊತ್ತಂಬರಿಯ ಚಟ್ನಿ ಮಾಡಿ ಬಡಿಸಿದ್ದರು ಎಂದು ಅವಳು ಹೇಳುತ್ತಿದ್ದಳು. ಆಶ್ರಮದಲ್ಲಿ ಎಲ್ಲರಿಗೂ ಹುಣಸೆ ಹಣ್ಣಿನ ಚಟ್ನಿಯನ್ನು ಬಡಿಸಲಾಯಿತು, ಆದರೆ ಬಾರವರ ಈ ಮುದ್ದಿನ ಸೊಸೆಗೆ ವಿಶೇಷವಾಗಿ ಹಸಿರು ಕೊತ್ತಂಬರಿಯ ಚಟ್ನಿಯನ್ನು ಬಡಿಸಿದರು...’

‘ಸುರೇಂದ್ರಜಿ...’ ಕೇಶವಲಾಲರು ಸುರೇಂದ್ರರ ಉತ್ಸಾಹವನ್ನು ಮಧ್ಯದಲ್ಲಿಯೇ ತಡೆದು ಹೇಳಿದರು, ‘ನಾನು ನಿಮಗೊಂದು ಜರೂರು ವಿಷಯ ಹೇಳಬೇಕಿದೆ...’ ಸುರೇಂದ್ರ ಮಶರೂವಾಲಾ ಗಮನವಿಟ್ಟು ಕೇಳಿದರು. ಈಗ್ಗೆ ಸ್ವಲ್ಪ ಹೊತ್ತಿಗೆ ಮೊದಲು ಟೆಲಿಫೋನಿನಲ್ಲಿ ಕೇಳಿದ ಸುದ್ದಿಯನ್ನು ಕೇಶವಲಾಲರು ಹೇಳಿದರು.

‘ಸುರೇಂದ್ರಜಿ, ಕೇಶವಲಾಲರು ಕಡೆಯಲ್ಲಿ ಹೇಳಿದರು, ‘ನೀವೀಗ ಇಲ್ಲಿಗೇ ಬಂದು ಬಿಡಿ... ನಾವು ಫೌರಸ್ ರೋಡಿಗೆ ಹೋಗಿ, ಸಾಧ್ಯವಾದರೆ ಆ ಬಾಯಿಯನ್ನು ಹುಡುಕೋಣ. ವಿಷಯ ತಿಳಿದ ನಂತರ ಶಿವಡಿ ಆಸ್ಪತ್ರೆಗೆ ಹೋಗೋಣ...ಸರಿ ಕಂಡರೆ ಬೇರೆಯವರಿಗೂ ವಿಷಯ ತಿಳಿಸೋಣ...’

‘ನಾನೀಗಲೇ ಬಂದೆ’ ಸುರೇಂದ್ರರು ರಿಸೀವರನ್ನು ಕೆಳಗಿಟ್ಟರು.

ತಮ್ಮ ನಿವಾಸ ಖಾರ್‌ನಿಂದ ಕಿಂಗ್ಸ್ ಸರ್ಕಲ್‌ಗೆ ಬರಲು ಸುರೇಂದ್ರರಿಗೆ ಅರ್ಧಮುಕ್ಕಾಲು ಗಂಟೆಯ ಸಮಯವಂತೂ ಬೇಕಾಗಿತ್ತು. ಈ ನಡುವೆ ಕೇಶವಲಾಲರು ಕೋಣೆಯಲ್ಲಿ ಸುತ್ತು ಹಾಕಿದರು. ಅವನಿಗೆ ಚಿಂತೆ ಕಾಡಿದಾಗ ಹೀಗೆ ಸುತ್ತು ಹಾಕುವುದು ಸಾಮಾನ್ಯವಾಗಿತ್ತು. ಕೇಶವಲಾಲರು ಈಗ್ಗೆ ನಾಲ್ಕು ತಿಂಗಳ ಹಿಂದೆ ಹರಿಲಾಲ ಚಿಕ್ಕಪ್ಪನನ್ನು